ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು-560065

* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 11.09.2015

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ.

ಈ ವಾರದ ಮುನ್ಸೂಚನೆ (ದಿನಾಂಕ 12.09.15 –16.09.15 ವರೆಗೆ)

ನಿಯತಾಂಕಗಳು	12.09.15	13.09.15	14.09.15	15.09.15	16.09.15
ಮಳೆ (ಮಿ ಮಿ)	4	0	0	7	4
ಗರಿಷ್ಠ ಉಷ್ಣಾಂಶ(ಡಿ.ಸೆ.)	28	29	30	30	29
ಕನಿಷ್ಠ ಉಷ್ಣಾಂಶ (ಡಿ.ಸೆ.)	19	20	20	19	20
ಮೋಡ (ಪ್ರಮಾಣ)	8	5	7	6	6
ಅರ್ದ್ರತೆ ೭.೨೦ ಬೆ (ಶೇ)	90	86	90	87	86
ಅರ್ದ್ರತೆ ೨.೨೦ ಮ (ಶೇ)	63	64	61	65	69
ಗಾಳಿಯ ವೇಗ (ಕಿ.ಮಿ/ಗಂಟೆಗೆ)	6	8	6	7	5
ಗಾಳಿಯ ದಿಕ್ಕು (ಡಿಗ್ರಿ)	230	230	240	240	270

ಮುಂದಿನ ದಿನಗಳಲ್ಲಿ ಹಗುರ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ **28.0-30.0°C** ಮತ್ತು ಕನಿಷ್ಠ **19.0-20.0°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **86-90 %** ಇದ್ದು ಮಧ್ಯಾಹ್ನ **61-69 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **5-8** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಜಿ.ಪಿ.ಯು–26,28,45.48, ಇಂಡಾಫ್ಫ್ 7,9 & 15 ರಾಗಿ ತಳಿಗಳನ್ನು ಬಿತ್ತನೆ ಮಾಡಬಹುದು. ಸೂರ್ಯಕಾಂತಿ ತಳಿಗಳಾದ ಮಾರ್ಡೆನ್, ಕೆ.ಬಿ.ಎಸ್.ಹೆಚ್–1, ಕೆ.ಬಿ.ಎಸ್.ಹೆಚ್–41, ಕೆ.ಬಿ.ಎಸ್.ಹೆಚ್–42, ಕೆ.ಬಿ.ಎಸ್.ಹೆಚ್–44, ಕೆ.ಬಿ.ಎಸ್.ಹೆಚ್–53 ತಳಿಗಳನ್ನು ಬಿತ್ತನೆ ಮಾಡಬಹುದು. ಶಕ್ತಿಮಾನ್ ಜೋಳದ ತಳಿಗಳಾದ ಡೆಕ್ಕನ್–103, ವಿಜಯ ಕಾಂಪೋಸಿಟ್ ಮತ್ತು ಗಂಗಾ–11 ತಳಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಅಲಸಂದೆ ಬೆಳೆಯಲ್ಲಿ ಸಿ–152 ಮತ್ತು ಕೆ.ಎಮ್–5, ಅಥವಾ ತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.
- ಅಲ್ಪಾವಧಿ ಬೆಳೆಗಳಾದ ಹುರುಳಿ, ಅಲಸಂದೆ, ಸಜ್ಜೆ, ಉದ್ದು, ನವಣೆ, ಸಾಮೆ, ಹೆಸರು ಬೆಳೆಗಳನ್ನು ಬೆಳೆಯಬಹುದು
- ರಾಗಿ ಬೆಳೆಯಲ್ಲಿ ಸಸಿಗಳ ಸಂಖ್ಯೆಯನ್ನು ಶಿಫಾರಸ್ಸು ಮಾಡಿದ ಸಂಖ್ಯೆಯಲ್ಲಿ ಉಳಿಸಿಕೊಳ್ಳುವುದು ಇದರಿಂದ ತೇವಾಂಶ ಸದ್ಬಳಕೆಯಾಗುವುದು.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು